## ನಿಮ್ಮೊಡನೆ

# ತಾಯ್ತನವೂ ಪುರುಷ ಪ್ರಧಾನ ವ್ಯವಸ್ಥೆಯೂ

> ನಟಿ ಭಾವನಾ ಐವಿಎಫ್ ಮೂಲಕ ತಾಯ್ತನವನ್ನು ಆನಂದಿಸುತ್ತಿದ್ದಾರೆ. ಅದನ್ನು ಪ್ರಶ್ನಿಸುವ ಮನಸುಗಳು, ಹೆಣ್ಣು ಹೆರುವ ತೊತ್ತು ಎಂದು ಕಾಣುವುದರ ಪ್ರತೀಕವಾಗಿವೆ. ಇಂಥ ನಿರ್ಧಾರಗಳನ್ನು ಪ್ರಶ್ನಿಸುವ ಬದಲು, ಈ ತೀರ್ಮಾನದ ಹಿಂದಿನ ಕಾರಣಗಳನ್ನು ಹುಡುಕಬೇಕಿದೆ.

ಐವಿಎಫ್ ಭಾರತದಲ್ಲಿ ಈ ಕಾಲು ಶತಮಾನದಿಂದೀಚೆಗೆ ಫಲವಂತಿಕೆಗೆ ಪರ್ಯಾಯ ಚಿಕಿತ್ಸೆ ಎಂಬಂತೆ ಬೆಳೆದುನಿಂತಿದೆ. ದಾನಿಗಳಿಂದ ಆರೋಗ್ಯವಂತ ಅಂಡಾಣು ಅಥವಾ ವೀರ್ಯಾಣು ಪಡೆದು, ಭ್ರೂಣ ಫಲಿತಗೊಳಿಸುವ ತಂತ್ರಜ್ಞಾನ ಇದು. ದಾನಿಗಳಿಂದಲ್ಲದೇ, ಸಹಜವಾಗಿ ಗರ್ಭಧಾರಣೆಯಾಗದ ದಂಪತಿಗೆ ಅವರದ್ದೇ ವೀರ್ಯಾಣು ಮತ್ತು ಅಂಡಾಣುಗಳನ್ನು ಫಲಿತಗೊಳಿಸಿ, ತಮ್ಮದೇ ಕುಡಿಯೊಂದು ಅರಳುವಂತೆ ಮಾಡಿದ ತಂತ್ರಜ್ಞಾನ.

ದಾಂಪತ್ಯದ ಚೌಕಟ್ಟಿನಲ್ಲಿ ಫಲವಂತಿಕೆ ಎಂದಿಗೂ ಪ್ರಶ್ನಾರ್ಹವಾಗಿರಲಿಲ್ಲ. ಬಂಜೆಂಬ ಶಬುದದ ಭಾರ ಹೊರಲಾಗದ ಸಮಾಜ ಇರುವುದರಿಂದಲೇ ತಾಯ್ತನ ಬಾಡಿಗೆ ತಾಯ್ತನವಾದಾಗಲೂ ಚರ್ಚೆಗಳಾದವೇ ಹೊರತು ಪ್ರಶ್ನಾರ್ಹವಾಗಿರಲಿಲ್ಲ. ಸುಷ್ಮಿತಾ ಸೇನ್ ಒಂಟಿ ತಾಯಿಯಾಗುವುದಾಗಿ ನಿರ್ಧರಿಸಿ ಮೊದಲ ಮಗು ರೆನೆಯನ್ನು ದತ್ತು ಪಡೆಯುವಾಗಲೂ ನ್ಯಾಯಾಲಯದ ಮೆಟ್ಟಿಲು ಹತ್ತಿದ್ದರು. ಮದುವೆಯಾಗದೇ ಮಗು ಪಡೆಯುವುದು ಸಾಧುವಲ್ಲ. ಸಮಾಜದಲ್ಲಿ ವ್ಯತಿರಿಕ್ತ ಪರಿಣಾಮ ಬೀರಬಹುದು. ಮಗುವಿನ ಭವಿಷ್ಯಕ್ಕೆ ಗಾಸಿಯಾಗಬಹುದು ಎಂದೆಲ್ಲ ಆಗ ವಾದಿಸಿದ್ದರು.

ಆದರೆ ಇದೇ ಸಮಾಜ ಎಂದಿಗೂ ವೈವಾಹಿಕ ಚೌಕಟ್ಟಿನಲ್ಲಿಯೇ ಇದ್ದುಕೊಂಡೂ ಏಕ ಪೋಷಕರ ಪಾತ್ರ ನಿರ್ವಹಿಸುವವರ ಪರವಾಗಿ ಮಾತಾಡಲಿಲ್ಲ. ವಿಧುರರು ಮಕ್ಕಳನ್ನು ಬೆಳೆಸುವ, ವಿಧವೆಯರು ಮಕ್ಕಳನ್ನು ಬೆಳೆಸುವ, ಅರೆವಿಧವೆಯರು (ಕಾಣೆಯಾದ, ಯುದ್ಧ ಸಮಯದಲ್ಲಿ ಕಣ್ಮರೆಯಾದ ಯೋಧ ಮತ್ತು ಪುರುಷರ ಹೆಂಡತಿಯರು) ಮಕ್ಕಳನ್ನು ಬೆಳೆಸುವುದು ಎಂದಿಗೂ ಚರ್ಚೆಗೆ ಬರಲಿಲ್ಲ. ಇವೆಲ್ಲವೂ ಈ ಸಮಾಜದಲ್ಲಿ ಒಪ್ಪಿತ ಸಂದರ್ಭಗಳು.

ಸೃಷ್ಟಿ ಕ್ರಿಯೆಯಲ್ಲಿ ಮಗುವನ್ನು ಜತನದಿಂದ ಬುವಿಗೆ ತರುವ ಜವಾಬ್ದಾರಿ ಮಹಿಳೆಯರದ್ದೇ ಆಗಿದೆ. ಆದರೆ ಹೆತ್ತ ಆನಂತರದ ಹೊಣೆಗಾರಿಕೆಯಲ್ಲಿ ಪಾಲು ಪಡೆಯುವುದೇ ತಂದೆಯಿಂದ ಅಪ್ಪನಾಗುವ ಪ್ರಕ್ರಿಯೆಯಾಗಿದೆ. ಬೇಜವಾಬ್ದಾರಿ ಗಂಡಸರು, ನಿರುದ್ಯೋಗಿಗಳು, ಕುಡುಕರು, ಹೆಂಗಸರ ಖಯಾಲಿ ಇದ್ದವರು, ಮಕ್ಕಳನ್ನು ನಿರ್ಲಕ್ಷಿಸುವವರು, ಅವಹೇಳನ ಮಾಡುವವರು, ಕಡೆಗಣಿಸುವವರು, ಮಕ್ಕಳಿಗೆ ಹಿಂಸೆ ಕೊಡುವವರು ಇವರೆಲ್ಲರೂ ತಂದೆಯ ಹೆಸರನ್ನು ನೀಡಿರುತ್ತಾರೆ. ಕರ್ತವ್ಯ ನಿಭಾಯಿಸಿರುವುದಿಲ್ಲ. ಇಂಥ ಯಾವುದನ್ನೂ ಈ ಸಮಾಜ ಪ್ರಶ್ನಿಸುವುದಿಲ್ಲ. ಇಂಥ ಅಸಹಜ ಕೌಟುಂಬಿಕ ಮೌಲ್ಯಗಳೂ ಸಾಮಾನ್ಯವೆಂಬಷ್ಟು ಸಹಜವಾಗಿವೆ.

ಮಹಿಳೆಯೊಬ್ಬಳು ಬಾಂಧವ್ಯದಲ್ಲಿ ಹಿಂಸೆ, ಕ್ರೌರ್ಯ, ಬೇಜವಾಬ್ದಾರಿತನ, ತಮ್ಮ ಗಳಿಕೆಯನ್ನು, ತಮ್ಮನ್ನೂ ಬಳಸಿಕೊಳ್ಳುವ ಬಂಧಗಳಿಂದ ದೂರ ಇರಬೇಕೆನ್ನುವ ತೀರ್ಮಾನ ಕೈಗೊಂಡಾಗ ಎಲ್ಲವೂ ಪ್ರಶ್ನಾರ್ಹವಾಗುತ್ತದೆ.

ಮಹಿಳೆಯರು ಆರ್ಥಿಕವಾಗಿ ಸದೃಢವಾದಷ್ಟೂ, ಭಾವನಾತ್ಮಕವಾಗಿ ಸ್ವಾವಲಂಬಿಯಾದಷ್ಟೂ ಇಂಥ ಬಾಂಧವ್ಯಗಳಿಂದ ದೂರ ಸರಿಯುತ್ತಾರೆ. ಪುರುಷರ ಆಸರೆ, ಪುರುಷರ ಸಾಂಗತ್ಯ ಎಂಬ ಪದಗಳೇ ಕ್ಲೀಷೆ ಎನಿಸತೊಡಗುತ್ತವೆ.

ನಟಿ ಭಾವನಾ ಯಾರ ಆಸರೆಯೂ ಇಲ್ಲದೆ ಮಕ್ಕಳನ್ನು ಪಡೆದು ಬೆಳೆಸುವ ನಿರ್ಧಾರ ಕೈಗೊಂಡಿದ್ದಾರೆ. ಅದನ್ನು ಪ್ರಶ್ನಿಸುವ ಮನಸುಗಳು, ಈಗಲೂ ಹೆಣ್ಣು ಮಕ್ಕಳನ್ನು ಹೆರುವ ತೊತ್ತುಗಳಾಗಿಯೇ ಕಾಣುವುದರ ಪ್ರತೀಕವಾಗಿವೆ. ಇಂಥ ನಿರ್ಧಾರಗಳನ್ನು ಪ್ರಶ್ನಿಸುವ ಬದಲು, ಈ ತೀರ್ಮಾನದ ಹಿಂದಿನ ಕಾರಣಗಳನ್ನು ವಿಶ್ಲೇಷಿಸಬೇಕು. ಕೌಟುಂಬಿಕ ವ್ಯವಸ್ಥೆ ಶಿಥಿಲಗೊಂಡಿರುವುದು, ಬಾಂಧವ್ಯಗಳಲ್ಲಿ ಬಿರುಕು ಬರುತ್ತಿರುವುದು, ಇವುಗಳಲ್ಲಿ ಬಹುತೇಕವಾಗಿ ನಲುಗುವುದು ಮಹಿಳೆಯರೇ ಆಗಿದ್ದಾರೆ. ಸಮಾಜ ದುರಸ್ತಿ ಮಾಡಬೇಕಿರುವುದು ಇಂಥ ಅಸುರಕ್ಷಿತ ಭಾವ ಮೂಡಿಸುತ್ತಿರುವ ಪುರುಷಾಹಂಕಾರ ಮನಸ್ಥಿತಿಯನ್ನು ಮತ್ತು ದುರ್ಬಲವಾಗಿರುವ ಕುಟುಂಬ ವ್ಯವಸ್ಥೆಯನ್ನು.

ತಮ್ಮ ಅಸ್ತಿತ್ವದ ಪ್ರಶ್ನೆ ಎಂಬಂತೆ ಹಾರಾಡುತ್ತಿರುವ ಪುರುಷರೆಲ್ಲರೂ ತಮ್ಮ ನೈಸರ್ಗಿಕ ಸಹಜಗುಣವಾಗಿರುವ ಸುರಕ್ಷೆಯನ್ನು ನೀಡುವತ್ತ ಗಮನಹರಿಸುವುದು ಒಳಿತು. ಆ ಸುರಕ್ಷೆ ಆರ್ಥಿಕವಾಗಿ, ಭಾವನಾತ್ಮಕವಾಗಿ ಮತ್ತು ಸಾಮಾಜಿಕವಾಗಿಯೂ ಇರಬೇಕು.

ಸಾಂಗತ್ಯದಲ್ಲಿ ಹೊರುವ ಹೆರುವ ಹೆಚ್ಚುವರಿ ಜವಾಬ್ದಾರಿ ಮಾತ್ರ ಮಹಿಳೆಯರದ್ದು. ಉಳಿದಂತೆ ಬೆಳೆಸುವ, ಪೋಷಿಸುವ ಹೊಣೆಗಾರಿಕೆ ಇಬ್ಬರದ್ದೂ ಆಗಿರಬೇಕು. ಅದೂ ಅರಿವು ಮತ್ತು ಅಂತಃಕರಣದಿಂದ ಬರಬೇಕು. ಹೇಳುವುದರಿಂದ ಅಥವಾ ಹೇರುವುದರಿಂದ ಅಲ್ಲ. ಇಲ್ಲದಿದ್ದಲ್ಲಿ ಹಿಂಸೆ, ಕ್ರೌರ್ಯ, ಬೇಜವಾಬ್ದಾರಿಯುತ, ಸಹಭಾಗಿತ್ವ ಇಲ್ಲದ ಸಾಂಗತ್ಯಗಳು ಸ್ವಾವಲಂಬಿ ಮಹಿಳೆಯರಿಂದ ತಿರಸ್ಕೃತವಾಗುತ್ತಲೇ ಇರುತ್ತವೆ. ಆ ತಿರಸ್ಕಾರವನ್ನು ಒಪ್ಪದ ಸಮಾಜ, ಬಿರುಕು ಬಿಡುತ್ತಿರುವ, ಶಿಥಿಲಗೊಳ್ಳುತ್ತಿರುವ ಕೌಟುಂಬಿಕ ವ್ಯವಸ್ಥೆಯನ್ನು ಸರಿಪಡಿಸುವತ್ತ ಗಮನಹರಿಸಬೇಕಾಗಿದೆ.

■ ರಶ್ಮಿ ಎಸ್




ಈಶ್ವರ್